ಅಸ್ತಿತ್ವಕ್ಕೆ ಬಂದಿತ್ತು. 'ಸುಧಾ'ದಲ್ಲಿ ಧಾರಾವಾಹಿಯಾಗಿ ಪ್ರಕಟಗೊಂಡ 'ದಮಯಂತಿ' ಎಂಬ ಕಾದಂಬರಿಯನ್ನು ಪ್ರಾಧಿಕಾರ ಪುಸ್ತಕ ರೂಪದಲ್ಲಿ ಪ್ರಕಟಿಸಿತು.

ಒಂದು ದಿನ ಗೌರಿ ಲಂಕೇಶ್ ಅವರು ಫೋನಾಯಿಸಿ, ನಾನು ಆತನಕ ಅನುವಾದಿಸಿದ ಕಮಲಾದಾಸ್ ಅವರ ಕಥೆಗಳ ಪ್ರಕಟಣೆಗೆ ಆಸಕ್ತಿ ತೋರಿಸಿದರು; ಅದೇ ವರ್ಷ ಕಮಲಾದಾಸ್ ಅವರ ಮೊದಲ ಕಥಾಸಂಕಲನ ಕನ್ನಡದಲ್ಲಿ ಪ್ರಕಟವಾಯಿತು.

◆ **ಅನುವಾದ ಅತ್ಯಂತ ನಿರ್ಲಕ್ಷಿತ ಪ್ರಕಾರಗಳಲ್ಲೊಂದು ಎನ್ನುವ ಭಾವನೆ ಇದೆ. ನಿಮ್ಮ ಅನುಭವವೇನು?**

ಕರ್ನಾಟಕದ ಮಟ್ಟಿಗೆ ಅನುವಾದ ಸಾಹಿತ್ಯವಾಗಲೀ, ಸಾಹಿತಿಯಾಗಲೀ ನಿರ್ಲಕ್ಷಿತವಲ್ಲ. ಕರ್ನಾಟಕದಲ್ಲಿ ಅನುವಾದಕ್ಕಾಗಿಯೇ ಸ್ಥಾಪನೆಯಾಗಿರುವ ಸರ್ಕಾರದ ಸಂಸ್ಥೆ 'ಕುವೆಂಪು ಭಾಷಾಭಾರತಿ ಪ್ರಾಧಿಕಾರ' ಸಾಕಷ್ಟು ಸಂಖ್ಯೆಯಲ್ಲಿ ಅನುವಾದಿತ ಕೃತಿಗಳನ್ನು ಪ್ರಕಟಿಸುತ್ತಿದೆ. ಅತ್ಯುತ್ತಮ ಅನುವಾದಕ್ಕೆ ಪುಸ್ತಕ ಪ್ರಶಸ್ತಿ ಮತ್ತು ಗೌರವ ಪ್ರಶಸ್ತಿಗಳನ್ನು ಪ್ರತಿವರ್ಷ ನೀಡುತ್ತಾ ಬಂದಿದೆ. ಆದ್ದರಿಂದ ಕನ್ನಡದಲ್ಲಿ ಅನುವಾದ ನಿರ್ಲಕ್ಷಿತವಲ್ಲವೆಂದೇ ಹೇಳಬಹುದು. ವೈಯಕ್ತಿಕ ಅನುಭವಗಳು ಬೇರೆ. ಸಾಕಷ್ಟು ಅವಮಾನಗಳನ್ನು ಅನುಭವಿಸಿರುವೆ. ಸಂಭಾವನೆಯ ವಿಷಯದಲ್ಲಿಯೂ ಅಷ್ಟೆ. ಮೂಲ ಲೇಖಕರಿಗೆ ಪೇಮೆಂಟ್. ಅನುವಾದಕರಿಗೆ ನೋ ಪೇಮೆಂಟ್. ಬಹುತೇಕ ಮಲಯಾಳಂ ಲೇಖಕರು ಅನುವಾದಕರನ್ನು 'ನಮ್ಮಿಂದ ಇವರು ಹಣ ಮಾಡುತ್ತಿದ್ದಾರೆ' ಎಂಬ ಭಾವನೆಯಲ್ಲಿಯೇ ನೋಡುತ್ತಾರೆ. ಅಸಲಿಗೆ ಸ್ವಂತ ಬರವಣಿಗೆಗಿಂತ ಅನುವಾದ ಕಷ್ಟಕರವಾದುದು ಎಂದು ಹೆಚ್ಚಿನವರು ಅರ್ಥ ಮಾಡಿಕೊಳ್ಳಲಾರರು. ಕೆಲವೊಮ್ಮೆ ಅನುವಾದಕನಿಗೆ ಸಿಗುವ ಸಂಭಾವನೆಯ ಪೂರ್ಣಮೊತ್ತವನ್ನು ಮೂಲ ಲೇಖಕರಿಗೆ ಪಾವತಿಸಬೇಕಾಗುತ್ತದೆ. ಆರು ಪುಟಗಳ ಒಂದು ಕಥೆಯನ್ನು ಅನುವಾದಿಸಲು ನಾನು ಒಂದು ವಾರ ತೆಗೆದುಕೊಂಡಿರುವೆ. ಆದರೆ ಸ್ವಂತವಾಗಿ ಆರು ಪುಟ ಬರೆಯಲು ಒಂದೂವರೆ ಗಂಟೆ ಸಾಕಾಗುತ್ತದೆ. ಆದರೆ ಇತ್ತೀಚೆಗಿನ ಮಲಯಾಳಂ ಲೇಖಕರು ಅನುವಾದಕರನ್ನು ದೇವದೂತರಂತೆ ಕಾಣುತ್ತಾರೆ. ಆದರೆ ಹಳಬರು, 'ಅವರಿಂದ ನಾವು ಹಣ ಮಾಡುವವರು' ಎಂದು ಭಾವಿಸುತ್ತಾರೆ.

◆ **ಸಾಕಷ್ಟು ಕೃತಿಗಳನ್ನು ಅನುವಾದಿಸಿರುವ ನಿಮಗೆ ಇನ್ನು ಅನುವಾದ ಸಾಕು, ಸ್ವಂತದ್ದೇನಾದರೂ ಬರೆಯೋಣ ಅನ್ನಿಸಿದೆಯೇ?**

ಇಎಂಎಸ್ಎನ್ ಅವರ ಲೇಖನಗಳ ಅನುವಾದದ ನಂತರ ಸ್ವಂತದ್ದೇನಾದರೂ ಬರೆಯೋಣ ಎಂದು ಅನಿಸಿದ್ದುಂಟು. ವಿದ್ಯಾರ್ಥಿಯಾಗಿದ್ದಾಗ ಕೆಲವು ಕಥೆ ಕವನಗಳನ್ನು ಬರೆದು, ಅವು ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದಿದೆ. 1979ರಲ್ಲಿ ಬೆಂಗಳೂರಿಗೆ ವರ್ಗವಾಗಿ ಬಂದೆ. 1980ರಲ್ಲಿ ಪ್ರಾರಂಭವಾದ 'ಲಂಕೇಶ್ ಪತ್ರಿಕೆ' ಆಗೊಮ್ಮೆ ಈಗೊಮ್ಮೆ ಕಥೆಗಳನ್ನು ಪ್ರಕಟಿಸುತ್ತಿತ್ತು. ಆರು ಪುಟಗಳ ಒಂದು ಕಥೆಯನ್ನು ಬರೆದು 'ಲಂಕೇಶ್ ಪತ್ರಿಕೆ' ಕಚೇರಿಗೆ ಹೋದಾಗ, ನನ್ನ ಪರಿಚಯ ಕೇಳಿದ ಲಂಕೇಶ್, 'ಕಥೆಯನ್ನು ಇಟ್ಟು ಹೋಗು. ನಾಳೆ ಹನ್ನೊಂದು ಗಂಟೆಗೆ ಬಾ' ಎಂದು ಹೇಳಿದರು. ಮರುದಿನ ಲಂಕೇಶ್ ಅವರ ಚೇಂಬರ್‌ಗೆ ಹೋದೆ. ಅಲ್ಲಿ ಸಿಗರೇಟಿನ ದಟ್ಟವಾದ ಹೊಗೆ. 'ಸರ್... ನನ್ನ ಕಥೆ?' ಎಂದೆ. 'ಹೇಳ್ತೀನಿ ಕೂತ್ಕೋ' ಅಂದ್ರು. ಸಿಗರೇಟಿನ ಹೊಗೆ ಬಿಡುತ್ತಲೇ ಇದ್ದವರು ಕಾಫಿ ತರಿಸಿಕೊಟ್ಟರು. ಕಾಫಿ ಕುಡಿದ ಮೇಲೆ ಕುರ್ಚಿಯ ತುದಿಯಲ್ಲಿ ಕುಳಿತು ಕೇಳಿದೆ. ಸಿಗರೇಟನ್ನು ಆಳವಾಗಿ ಎಳೆದು ಹೊಗೆ ಉಗುಳುತ್ತ ಹೇಳಿದರು. 'I will be happy if you write' ಎಂದರು. ನಾನು ಆಕಾಶದೆತ್ತರಕ್ಕೆ ಬೆಳೆದು ನಿಂತೆ. ಲಂಕೇಶ್ ನನ್ನ ಕಥೆಯನ್ನು ಒಪ್ಪಿಕೊಂಡಿದ್ದಾರೆಂಬುದು ನನ್ನ ಆನಂದ. ಅನಂತರ ಎರಡು ಸಾರಿ ಸಿಗರೇಟು ಎಳೆದು ಹೇಳಿದರು. 'I will be very happy if you don't write.'

ಆಕಾಶದಲ್ಲಿ ವಿಹರಿಸುತ್ತಿದ್ದ ನಾನು ಥಟ್ಟೆಂದು ಪಾತಾಳಕ್ಕೆ ಬಿದ್ದೆ. ಅವರು ಕಥೆಯ ಬಗ್ಗೆ ಟೀಕಿಸುತ್ತಲೇ ಇದ್ದರು. ಕೊನೆಗೆ ಒಂದಷ್ಟು ಪುಸ್ತಕಗಳನ್ನು ಕೊಟ್ಟು 'ಇದೆಲ್ಲಾ ಓದು. ಅನಂತರ ಒಂದು ಕಥೆಯನ್ನು ಬರೀಲಿಕ್ಕೆ ಟ್ರೈ ಮಾಡು' ಎಂದು ಬೀಳ್ಕೊಟ್ಟರು. ಅಲ್ಲಿಗೆ ನನ್ನ ಸ್ವಂತ ಬರವಣಿಗೆಯ ಪ್ರಯತ್ನ ನಿಂತುಹೋಯಿತು.

ಆದರೂ ನಾನು ಕೆಲವು ಲೇಖನಗಳನ್ನು